ಉಜಿರೆ: ವಿಚಾರಗೋಷ್ಠಿ

# ಕನ್ನಡ ಸಾಹಿತ್ಯವನ್ನು ಮುಂದಿನ ಪೀಳಿಗೆಗೆ ದಾಟಿಸುವ ಉದ್ದೇಶ: ಬಾಳಾಸಾಹೇಬ



ವಿದ್ಯಾರ್ಥಿಗಳು ಹೊರತಂದ ಕಗ್ಗೋಕ್ತಿ ಎಂಬ ಹೊತ್ತಗೆಯನ್ನು ಬಿಡುಗಡೆಗೊಳಿಸಲಾಯಿತು.

**ಬೆಳ್ತಂಗಡಿ** ಡಿ. 27: ಕನ್ನಡ ಸಾಹಿತ್ಯವನ್ನು ಹುಟ್ಟುಹಾಕಿದವರನ್ನು ನೆನೆಯುವ, ಸಾಹಿತ್ಯದ ಹಿಂದಿನ ಹೆಜ್ಜೆಗಳನ್ನು ಗುರುತಿಸುವ, ಅದನ್ನು ಮುಂದಿನ ಪೀಳಿಗೆಗೆ ದಾಟಿಸುವ ಉದ್ದೇಶದೊಂದಿಗೆ ಸಾಹಿತ್ಯ ಅಕಾಡೆಮಿ ಕಾರ್ಯ ನಿರ್ವಹಿಸುತ್ತಿದೆ ಎಂದು ಸಾಹಿತ್ಯ ಅಕಾಡೆಮಿಯ ಕನ್ನಡ ಸಲಹಾ ಸಮಿತಿ ಸದಸ್ಯ ಬಾಳಾಸಾಹೇಬ ಲೋಕಾಪುರ ಹೇಳಿದರು.

ಅವರು ಉಜಿರೆ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನ ಕನ್ನಡ ವಿಭಾಗದ ಆಶ್ರಯದಲ್ಲಿ ಕಾಲೇಜಿನ ಸಭಾಭವನದಲ್ಲಿ ಗುರುವಾರ ನಡೆದ ಮಿರ್ಜಿ ಅಣ್ಣಾರಾಯರ ಜನ್ಮ ಶತಮಾನೋತ್ಸವ ವಿಚಾರಗೋಷ್ಠಿಯನ್ನು ಅಣ್ಣಾರಾಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ಉದ್ಘಾಟಿಸಿ ಆಶಯ ಭಾಷಣ ಮಾಡಿದರು.

ಮಿರ್ಜಿ ನಿಸರ್ಗ ಕಾದಂಬರಿಯಲ್ಲಿ ಸಮಾಜದಲ್ಲಿ ಹೆಣ್ಣಾಗುವ ತುಳಿತವನ್ನು ವಿಷಾದವಾಗಿ ಚಿತ್ರಿಸಿದ್ದಾರೆ. ಸಮಾಜದಲ್ಲಿನ ವಿಸಂಗತ ಸಂಗತಿಗಳನ್ನು ಕಥೆ – ಕಾದಂಬರಿಗಳಲ್ಲಿ ಮೂಡಿಸುತ್ತಿದ್ದರು. ತಮ್ಮದೇ ಸಮುದಾಯದ ಆಚರಣೆ, ಸಂಪ್ರದಾಯಗಳ ಹುಳುಕನ್ನು ತೆರೆದಿಡುವಲ್ಲಿ ಹಿಂದೆ ಬೀಳಲಿಲ್ಲ ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಟಿ. ಎನ್. ಕೇಶವ ಮಾತನಾಡಿ, ಇಂದು ಸಾಹಿತ್ಯಕ್ಕೂ ಶಿಕ್ಷಣಕ್ಕೂ ಸಂಬಂಧವೇ ಇಲ್ಲದಂತಹ ಮನಃಸ್ಥಿತಿಯನ್ನು ವಿದ್ಯಾರ್ಥಿಗಳು ಹೊಂದಿದ್ದಾರೆ. ಅವರನ್ನು ಸಾಹಿತ್ಯದೊಳಗೆ ಕರೆ ತರಬೇಕಾದರೆ ಶಿಕ್ಷಣದ ಚೌಕಟ್ಟನ್ನು ಬದಲಿಸಬೇಕಾದ ಅನಿವಾರ್ಯ ಇದೆ. ಸಾಹಿತ್ಯ ಅಕಾಡೆಮಿ, ಸಾಹಿತ್ಯ ಪರಿಷತ್ ಮೊದಲಾದ ಕನ್ನಡಕ್ಕೆ ಸಂಬಂಧಪಟ್ಟ ಸಂಘಟನೆಗಳು ಶಿಕ್ಷಣದ ಭಾಗ ಆಗಬೇಕಾಗಿದೆ. ಸಾಹಿತ್ಯಕ್ಕೆ ಸಂಬಂಧಪಟ್ಟ ಹೊರಗಿನ ಸಂಪನ್ಮೂಲ ವ್ಯಕ್ತಿಗಳಿಗೆ ತರಗತಿಯಲ್ಲಿ ಅನುಭವಗಳನ್ನು ಹಂಚಿಕೊಳ್ಳುವ ವ್ಯವಸ್ಥೆ ಕಲ್ಪಿಸಿದಲ್ಲಿ ಏಕತಾನತೆ ಹೋಗಲಾಡಿಸಲು ಸಾಧ್ಯವಿದೆ ಮತ್ತು ಸಾಹಿತ್ಯದಲ್ಲಿ ಆಸಕ್ತಿ ಬೆಳೆಸಬಹುದಾಗಿದೆ ಎಂದರು.

ದ್ವಿತೀಯ ಬಿ.ಎ.ಯ ಐಚ್ಛಿಕ ಕನ್ನಡದ ವಿದ್ಯಾರ್ಥಿಗಳು ಹೊರತಂದ ಕಗ್ಗೋಕ್ತಿ ಎಂಬ ಹೊತ್ತಗೆಯನ್ನು ಪತ್ರಿಕೋದ್ಯಮ ವಿದ್ಯಾರ್ಥಿ ವಿಕ್ರಮ ಹಗ್ಡೆ ಅವರ ಪರಪಂಚ ಎಂಬ ಪತ್ರಿಕೆಯನ್ನು ಲೋಕಾಪುರ ಅನಾವರಣ ಗೊಳಿಸಿದರು.

ಅಕಾಡೆಮಿ ಕಾರ್ಯಕ್ರಮ ಅಧಿಕಾರಿ ರಾಧಾಕೃಷ್ಣ ಉಪಸ್ಥಿತರಿದ್ದರು. ಕನ್ನಡ ವಿಭಾಗ ಮುಖ್ಯಸ್ಥ ಬಿ.ಪಿ. ಸಂಪತ್ ಕುಮಾರ್ ಸ್ವಾಗತಿಸಿ, ಪ್ರಸ್ತಾವಿಸಿದರು. ವಿದ್ಯಾರ್ಥಿನಿ ಶ್ರುತಿ ವಂದಿಸಿದರು. ಉಪನ್ಯಾಸಕ ದಿವಾ ಕೊಕ್ಕಡ ನಿರೂಪಿಸಿದರು.

## ವಿಚಾರಗೋಷ್ಠಿ

ವಿಚಾರಗೋಷ್ಠಿಯ ಮೊದಲನೇ ಗೋಷ್ಠಿಯಲ್ಲಿ ಕನ್ನಡ ಕಾದಂಬರಿ ಪರಂಪರೆ ಮತ್ತು ಮಿರ್ಜಿ ಅಣ್ಣಾರಾಯ ಎಂಬ ಬಗ್ಗೆ ಸಬಿತಾ ಬನ್ನಾಡಿ, ಮಿರ್ಜಿ ಅಣ್ಣಾರಾಯರ ಕಥನದಲ್ಲಿ ಪ್ರಾದೇಶಿಕ ಅಸ್ಮಿತೆ ಬಗ್ಗೆ ವೆಂಕಟಗಿರಿ ದಳವಾಯಿ, ನಿಸರ್ಗ ಕಾದಂಬರಿಯಲ್ಲಿ ಸಾಮಾಜಿಕ ಪಲ್ಲಟಗಳು ಕುರಿತು ವೀರೇಶ ಬಡಿಗೇರ ಅವರು, ಎರಡನೇ ಗೋಷ್ಠಿಯಲ್ಲಿ ಮಿರ್ಜಿಯವರ ಸಾಹಿತ್ಯದಲ್ಲಿ ಮಹಿಳಾ ಅಸ್ಮಿತ್ವ ವಿಚಾರವಾಗಿ ಪದ್ಮಿನಿ ನಾಗರಾಜು, ಜೈನಧರ್ಮ, ಮಿರ್ಜಿ ಕುರಿತಾಗಿ ಶಾಂತಿನಾಥ ದಿಬ್ಬದ ಪ್ರಬಂಧ ಮಂಡಿಸಿದರು.

# ಅಕಾಡೆಮಿಯಿಂದ ಕನ್ನಡದ ಕೆಲಸ

ಸಂ.ಕ. ಸಮಾಚಾರ ಉಜಿರೆ

ಕನ್ನಡ ಸಾಹಿತ್ಯವನ್ನು ಹುಟ್ಟು ಹಾಕಿದವರನ್ನು ನೆನೆಯುವ, ಸಾಹಿತ್ಯದ ಹಿಂದಣ ಹೆಜ್ಜೆಗಳನ್ನು ಗುರುತಿಸುವ ಮತ್ತು ಅದನ್ನು ಮುಂದಿನ ಪೀಳಿಗೆಗೆ ದಾಟಿಸುವ ಉದ್ದೇಶವನ್ನು ಸಾಹಿತ್ಯ ಅಕಾಡೆಮಿ ಇಟ್ಟುಕೊಂಡು ಕಾರ್ಯ ನಿರ್ವಹಿಸುತ್ತಾ ಇದೆ ಎಂದು ಸಾಹಿತ್ಯ ಅಕಾಡೆಮಿ ಕನ್ನಡ ಸಲಹಾ ಸಮಿತಿ ಸದಸ್ಯ ಬಾಳಾಸಾಹೇಬ ಲೋಕಾಪುರ ಹೇಳಿದರು.

ಉಜಿರೆ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನ ಕನ್ನಡ ವಿಭಾಗದ ಆಶ್ರಯದಲ್ಲಿ ಕಾಲೇಜಿನ ಸಭಾಭವನದಲ್ಲಿ ಗುರುವಾರ ನಡೆದ ಮಿರ್ಜಿ ಅಣ್ಣಾರಾಯರ ಜನ್ಮ ಶತಮಾನೋತ್ಸವ ವಿಚಾರಗೋಷ್ಠಿಯನ್ನು ಅಣ್ಣಾರಾಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು. ದೇಸಿ ಪ್ರಜ್ಞೆಯ ಲೇಖಕರಾಗಿದ್ದ ಮಿರ್ಜಿಯವರು ನಿಸರ್ಗ ಕಾದಂಬರಿಯಲ್ಲಿ ಸಮಾಜದಲ್ಲಿ ಹೆಣ್ಣಿಗಾಗುವ ತುಳಿತವನ್ನು ವಿಶದವಾಗಿ ಚಿತ್ರಿಸಿದ್ದಾರೆ. ಬಂಡೆಗಲ್ಲಿನಲ್ಲಿನ ಒಡಕುಗಳನ್ನು ಗುರುತಿಸುವಂತೆ, ಸಮಾಜದಲ್ಲಿನ ವಿಸಂಗತ ಸಂಗತಿಗಳನ್ನು ಕಥೆ–ಕಾದಂಬರಿಗಳಲ್ಲಿ ಮೂಡಿಸುತ್ತಿದ್ದರು. ತಮ್ಮದೇ ಸಮುದಾಯದ ಆಚರಣೆ, ಸಂಪ್ರದಾಯಗಳ ಹುಳುಕುಗಳನ್ನೂ ತೆರೆದಿಡುವಲ್ಲಿ ಹಿಂದೆ ಬೀಳಲಿಲ್ಲ ಎಂದರು.

ಕಾಲೇಜಿನ ಪ್ರಾಚಾರ್ಯ ಟಿ.ಎನ್. ಕೇಶವ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭ



ದ್ವಿತೀಯ ಬಿ.ಎ.ಯ ಐಚ್ಛಿಕ ಕನ್ನಡದ ವಿದ್ಯಾರ್ಥಿಗಳು ಹೊರತಂದ 'ಕಗ್ಗೋಕ್ತಿ' ಎಂಬ ಹೊತ್ತಗೆಯನ್ನು ಹಾಗೂ ಪತ್ರಿಕೋದ್ಯಮ ವಿದ್ಯಾರ್ಥಿ ವಿಕ್ರಮ ಹಗ್ಡೆ ಅವರ 'ಪರಪಂಚ' ಎಂಬ ಪತ್ರಿಕೆಯನ್ನು ಲೋಕಾಪ… ಅನಾವರಣಗೊಳಿಸಿದರು. ಅಕಾಡೆಮಿ ಅಧಿಕಾರಿ ರಾಧಾಕೃಷ್ಣ ಉಪಸ್ಥಿತರಿದ್ದರು. ಕನ್ನಡ ವಿಭಾಗ ಮುಖ್ಯಸ್ಥ ಬಿ.ಪಿ.ಸಂಪತ್‌ಕುಮಾರ್ ಸ್ವಾಗತಿಸಿದರು, ವಿದ್ಯಾರ್ಥಿನಿ ಶೃತಿ ವಂದಿಸಿದರು. ಉಪನ್ಯಾಸಕ ದಿವಾ ಕೊಕ್ಕಡ ನಿರ್ವಹಿಸಿದರು.

ಸುದ್ದಿ 2 ನಿಮಿಷ

# 'ಅಜ್ಞಾತ ಬರಹಗಾರರನ್ನು ಗುರುತಿಸಿ'

ಉಜಿರೆ: 'ಅಜ್ಞಾತ ಬರಹಗಾರರನ್ನು ಗುರುತಿಸಿ ಗೌರವಿಸುವ ಕಾರ್ಯವನ್ನು ಅಕಾಡೆಮಿಗಳು ಮಾಡಬೇಕು' ಎಂದು ಡಾ. ಹಾ.ಮಾ.ನಾ ಸಂಶೋಧನಾ ಕೇಂದ್ರದ ನಿರ್ದೇಶಕ ಡಾ. ಎಸ್.ಡಿ. ಶೆಟ್ಟಿ ಹೇಳಿದರು.

ಉಜಿರೆಯ ಎಸ್.ಡಿ.ಎಂ ಕಾಲೇಜಿನಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ನೇತೃತ್ವದಲ್ಲಿ ಕನ್ನಡ ವಿಭಾಗದ ಸಹಯೋಗದೊಂದಿಗೆ ಗುರುವಾರ ಆಯೋಜಿಸಿದ್ದ ಮಿರ್ಜಿ ಅಣ್ಣಾರಾಯರ ಜನ್ಮ ಶತಮಾನೋತ್ಸವ ವಿಚಾರಗೋಷ್ಠಿಯಲ್ಲಿ ಅವರು ಸಮಾರೋಪ ಭಾಷಣ ಮಾಡಿದರು.

'ಶಿರ್ತಾಡಿ ಜಿನರಾಜ ಶಾಸ್ತ್ರಿ, ಪಂಡಿತ ಭುಜಬಲಿ ಶಾಸ್ತ್ರಿ, ಅಳಿಯೂರಿನ ಜೋತಿಷಿ ಎಂ. ಜಗತ್ಪಾಲಯ್ಯ, ಲೋಕನಾಥ ಶಾಸ್ತ್ರಿ, ಸುಬ್ಬಯ್ಯ ಶಾಸ್ತ್ರಿ ಸಾಹಿತ್ಯ ರಚನೆ ಮಾಡಿದ್ದರು. ಅಂತಹ ಪಂಡಿತರ ಸೇವೆ, ಸಾಧನೆಯನ್ನು ಗುರುತಿಸಿ ಗೌರವಿಸುವುದು ಅಕಾಡೆಮಿಗಳ ಕರ್ತವ್ಯವಾಗಿದೆ' ಎಂದರು. ಮಿರ್ಜಿ ಅಣ್ಣಾರಾಯರ ಸಾಹಿತ್ಯದಲ್ಲಿ ಮಹಿಳಾ ಅಸ್ತಿತ್ವದ ಬಗ್ಗೆ ಮಾತನಾಡಿದ ಪದ್ಮಿನಿ ನಾಗರಾಜು, 'ಮಿರ್ಜಿ ಅಣ್ಣಾರಾಯರು ತಮ್ಮ ಸಮಕಾಲೀನ ಸಮಸ್ಯೆಗಳನ್ನು ಕೃತಿಗಳಲ್ಲಿ ಪ್ರತಿಬಿಂಬಿಸಿದ್ದಾರೆ. ಪ್ರತಿಯೊಬ್ಬರಲ್ಲಿಯೂ ಹೆಣ್ತನ ಮತ್ತು ಗಂಡಸುತನ ಮಿಶ್ರವಾಗಿರುತ್ತದೆ' ಎಂದರು. ಧಾರವಾಡದ ಶಾಂತಿನಾಥ ದಿಬ್ಬದ ಮಾತನಾಡಿ, 'ಮಿರ್ಜಿ ಅಣ್ಣಾರಾಯರು 'ಜೈನ ಧರ್ಮ' ಗ್ರಂಥದಲ್ಲಿ ಎಲ್ಲಾ ಆಚಾರ ವಿಚಾರಗಳು ಹಾಗೂ ತತ್ವ - ಸಿದ್ಧಾಂತಗಳ ಬಗ್ಗೆ ಸಮಗ್ರ ಮಾಹಿತಿ ನೀಡಿದ್ದಾರೆ' ಎಂದರು. ಪ್ರೊ. ಕೆ.ವಿ ನಾಗರಾಜಪ್ಪ ಸ್ವಾಗತಿಸಿದರು. ಪ್ರೊ. ರಾಜಶೇಖರ ಹಳೆಮನೆ ಧನ್ಯವಾದ ಸಲ್ಲಿಸಿದರು.

# ಅಕಾಡೆಮಿಯಿಂದ ಸಾಹಿತಿಗಳ ಸ್ಮರಣೆ

## ಮಿರ್ಜಿ ಅಣ್ಣಾರಾಯರ ಜನ್ಮಶತಮಾನ ವಿಚಾರಗೋಷ್ಠಿಯಲ್ಲಿ ಬಾಳಾ ಸಾಹೇಬ ಹೇಳಿಕೆ

■ ವಿಜಯವಾಣಿ ಸುದ್ದಿಜಾಲ ಬೆಳ್ತಂಗಡಿ

ಕನ್ನಡ ಸಾಹಿತ್ಯ ಹುಟ್ಟುಹಾಕಿದವರನ್ನು ನೆನಪಿಸುವ, ಸಾಹಿತ್ಯದ ಹಿಂದಿನ ಹೆಜ್ಜೆಗಳನ್ನು ಗುರುತಿಸುವ ಮತ್ತು ಅದನ್ನು ಮುಂದಿನ ಪೀಳಿಗೆಗೆ ದಾಟಿಸುವ ಉದ್ದೇಶದಲ್ಲಿ ಸಾಹಿತ್ಯ ಅಕಾಡೆಮಿ ಕಾರ್ಯನಿರ್ವಹಿಸುತ್ತಿದೆ ಎಂದು ಅಕಾಡೆಮಿ ಕನ್ನಡ ಸಲಹಾ ಸಮಿತಿ ಸದಸ್ಯ ಬಾಳಾ ಸಾಹೇಬ ಲೋಕಾಪುರ ಹೇಳಿದರು.

ಉಜಿರೆ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನ ಕನ್ನಡ ವಿಭಾಗದ ಆಶ್ರಯದಲ್ಲಿ ಗುರುವಾರ ಆಯೋಜಿಸಿದ ಮಿರ್ಜಿ ಅಣ್ಣಾರಾಯರ ಜನ್ಮ ಶತಮಾನೋತ್ಸವ ವಿಚಾರಗೋಷ್ಠಿಯನ್ನು ಅಣ್ಣಾರಾಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮೂಲಕ ಉದ್ಘಾಟಿಸಿ ಮಾತನಾಡಿದರು. ದೇಸಿ ಪ್ರಜ್ಞೆಯ ಲೇಖಕರಾಗಿದ್ದ ಮಿರ್ಜಿಯವರು ನಿಸರ್ಗ ಕಾದಂಬರಿಯಲ್ಲಿ ಸಮಾಜದಲ್ಲಿ ಹೆಣ್ಣಿಗಾಗುವ ತುಳಿತವನ್ನು ವಿಷಾದವಾಗಿ ಚಿತ್ರಿಸಿದ್ದಾರೆ. ಬಂಡೆಗಲ್ಲಿನಲ್ಲಿನ ಒಡಕುಗಳನ್ನು ಗುರುತಿಸುವಂತೆ, ಸಮಾಜದಲ್ಲಿನ ವಿಸಂಗತ ಸಂಗತಿಗಳನ್ನು ಕಥೆ-ಕಾದಂಬರಿಗಳಲ್ಲಿ ಮೂಡಿಸುತ್ತಿದ್ದರು ಎಂದರು.

ಪ್ರಾಚಾರ್ಯ ಟಿ. ಎನ್.ಕೇಶವ ಮಾತನಾಡಿ, ಸಾಹಿತ್ಯ ಜೀವನದ ಅವಿಭಾಜ್ಯ ಅಂಗ. ಇಂದು ಸಾಹಿತ್ಯಕ್ಕೂ ಶಿಕ್ಷಣಕ್ಕೂ ಸಂಬಂಧವೇ ಇಲ್ಲದಂತಹ ಮನಸ್ಥಿತಿ ವಿದ್ಯಾರ್ಥಿಗಳು ಹೊಂದಿದ್ದಾರೆ. ಅವರನ್ನು ಸಾಹಿತ್ಯದೊಳಗೆ ಕರೆತರಬೇಕಾದರೆ ಶಿಕ್ಷಣದ ಚೌಕಟ್ಟು ಬದಲಿಸಬೇಕಾಗಿದೆ. ಸಾಹಿತ್ಯಅಕಾಡೆಮಿ, ಸಾಹಿತ್ಯ ಪರಿಷತ್ ಮೊದಲಾದ ಸಂಘಟನೆಗಳು ಶಿಕ್ಷಣದ ಭಾಗ ಆಗಬೇಕಾಗಿದೆ. ಸಂಪನ್ಮೂಲ ವ್ಯಕ್ತಿಗಳು ತರಗತಿಯಲ್ಲಿ ಅನುಭವಗಳನ್ನು ಹಂಚಿಕೊಳ್ಳುವ ವ್ಯವಸ್ಥೆ ಕಲ್ಪಿಸಿದಲ್ಲಿ ವಿದ್ಯಾರ್ಥಿಗಳು ಸಾಹಿತ್ಯದಲ್ಲಿ ಆಸಕ್ತಿ ಬೆಳೆಸಬಹುದಾಗಿದೆ ಎಂದರು.



ಉಜಿರೆ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನಲ್ಲಿ ಕಗ್ಗೋಕ್ತಿ ಹೊತ್ತಗೆ ಬಿಡುಗಡೆಗೊಳಿಸಲಾಯಿತು. ಸಾಹಿತ್ಯ ಅಕಾಡೆಮಿ ಕನ್ನಡ ಸಲಹಾ ಸಮಿತಿ ಸದಸ್ಯ ಬಾಳಾ ಸಾಹೇಬ ಲೋಕಾಪುರ ಮೊದಲಾದವರು ಇದ್ದರು.

> ಕಾಲೇಜಿನಿಂದ 100 ಪ್ರಬಂಧ ವಿಕಿಪಿಡಿಯಾಕ್ಕೆ ಅಪ್‌ಲೋಡ್ ಮಾಡುವ ಸಿದ್ಧತೆ ನಡೆಯುತ್ತಿದೆ. ಮುಂದಿನ ವರ್ಷದಿಂದ ಕಾಲೇಜಿನಲ್ಲಿ ಚಾಯಿಸ್ ಬೇಸ್‌ಡ್ ಕ್ರೆಡಿಟ್ ಸಿಸ್ಟಂ ಅಳವಡಿಸಲಾಗುತ್ತದೆ. ಇದರಿಂದ ವಿದ್ಯಾರ್ಥಿಗಳು ಹೆಚ್ಚುವರಿ ಆಸಕ್ತಿ ಇರುವ ಎರಡು ವಿಷಯ ಆಯ್ಕೆ ಮಾಡಿ ಓದಬಹುದು.
>
> । ಟಿ.ಎನ್. ಕೇಶವ ಪ್ರಾಚಾರ್ಯ, ಎಸ್‌ಡಿಎಂ ಕಾಲೇಜು ಉಜಿರೆ

ಈ ಸಂದರ್ಭ ದ್ವಿತೀಯ ಬಿ.ಎ.ಯ ಐಚ್ಛಿಕ ಕನ್ನಡದ ವಿದ್ಯಾರ್ಥಿಗಳು ಹೊರತಂದ ಕಗ್ಗೋಕ್ತಿ ಎಂಬ ಹೊತ್ತಗೆಯನ್ನು ಹಾಗೂ ಪತ್ರಿಕೋದ್ಯಮ ವಿದ್ಯಾರ್ಥಿ ವಿಕ್ರಮ ಹೆಗ್ಡೆ ಅವರ ಪರಪಂಚ ಎಂಬ ಪತ್ರಿಕೆಯನ್ನು ಬಾಳಾ ಸಾಹೇಬ ಲೋಕಾಪುರ ಅನಾವರಣಗೊಳಿಸಿದರು.

ಅಕಾಡೆಮಿ ಕಾರ್ಯಕ್ರಮ ಅಧಿಕಾರಿ ರಾಧಾಕೃಷ್ಣ ಉಪಸ್ಥಿತರಿದ್ದರು. ಕನ್ನಡ ವಿಭಾಗ ಮುಖ್ಯಸ್ಥ ಬಿ.ಪಿ.ಸಂಪತ್ ಕುಮಾರ್ ಸ್ವಾಗತಿಸಿ, ಪ್ರಸ್ತಾಪಿಸಿದರು. ವಿದ್ಯಾರ್ಥಿನಿ ಶ್ರುತಿ ವಂದಿಸಿದರು. ಉಪನ್ಯಾಸಕ ದಿವಾ ಕೊಕ್ಕಡ ನಿರ್ವಹಿಸಿದರು.

ವಿಚಾರಗೋಷ್ಠಿಯ ಮೊದಲನೇ ಗೋಷ್ಠಿಯಲ್ಲಿ ಕನ್ನಡ ಕಾದಂಬರಿ ಪರಂಪರೆ ಮತ್ತು ಮಿರ್ಜಿಅಣ್ಣಾರಾಯ ವಿಷಯದಲ್ಲಿ ಸಬಿತಾ ಬನ್ನಾಡಿ, ಮಿರ್ಜಿ ಅಣ್ಣಾರಾಯರ ಕಥನದಲ್ಲಿ ಪ್ರಾದೇಶಿಕ ಅಸ್ಮಿತೆ ಬಗ್ಗೆ ವೆಂಕಟಗಿರಿ ದಳವಾಯಿ, ನಿಸರ್ಗಕಾದಂಬರಿಯಲ್ಲಿ ಸಾಮಾಜಿಕ ಪಲ್ಲಟಗಳು ಕುರಿತು ವೀರೇಶ ಬಡಿಗೇರ ಅವರು, ಎರಡನೇ ಗೋಷ್ಠಿಯಲ್ಲಿ ಮಿರ್ಜಿಯವರ ಸಾಹಿತ್ಯದಲ್ಲಿ ಮಹಿಳಾ ಅಸ್ತಿತ್ವ ವಿಚಾರವಾಗಿ ಪದ್ಮಿನಿ ನಾಗರಾಜು, ಜೈನ ಧರ್ಮ ಹಾಗೂ ಮಿರ್ಜಿ ಕುರಿತಾಗಿ ಶಾಂತಿನಾಥ ದಿಬ್ಬದ ಪ್ರಬಂಧ ಮಂಡಿಸಿದರು.

ಹೊಸದಿಗಂತ

## ಉಜಿರೆ ಎಸ್‌ಡಿಎಂ ಕಾಲೇಜಿನಲ್ಲಿ ಮಿರ್ಜಿ ಅಣ್ಣಾರಾಯರ ಜನ್ಮ ಶತಮಾನೋತ್ಸವ ವಿಚಾರಗೋಷ್ಠಿ

# ಸಾಹಿತ್ಯದ ಹಿಂದಣ ಹೆಜ್ಜೆಗಳ ಗುರುತಿಸುವ ಕೆಲಸ ಶ್ಲಾಘನೀಯ

**ಬೆಳ್ತಂಗಡಿ:** ಕನ್ನಡ ಸಾಹಿತ್ಯವನ್ನು ಹುಟ್ಟುಹಾಕಿದವರನ್ನು ನೆನೆಯುವ, ಸಾಹಿತ್ಯದ ಹಿಂದಣ ಹೆಜ್ಜೆಗಳನ್ನು ಗುರುತಿಸುವ ಮತ್ತು ಅದನ್ನು ಮುಂದಿನ ಪೀಳಿಗೆಗೆ ದಾಟಿಸುವ ಉದ್ದೇಶವನ್ನು ಸಾಹಿತ್ಯ ಅಕಾಡೆಮಿ ಇಟ್ಟುಕೊಂಡು ಕಾರ್ಯ ನಿರ್ವಹಿಸುತ್ತಾ ಇದೆ ಎಂದು ಸಾಹಿತ್ಯ ಅಕಾಡೆಮಿಯ ಕನ್ನಡ ಸಲಹಾ ಸಮಿತಿ ಸದಸ್ಯ ಬಾಳಾ ಸಾಹೇಬ ಲೋಕಾಪುರ ಹೇಳಿದ್ದಾರೆ. ಉಜಿರೆ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನ ಕನ್ನಡ ವಿಭಾಗದ ಆಶ್ರಯದಲ್ಲಿ ಕಾಲೇಜಿನ ಸಭಾಭವನದಲ್ಲಿ ಗುರುವಾರ ನಡೆದ ಮಿರ್ಜಿ ಅಣ್ಣಾರಾಯರ ಜನ್ಮಶತಮಾನೋತ್ಸವ ವಿಚಾರಗೋಷ್ಠಿಯನ್ನು ಅಣ್ಣಾರಾಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವು ದರ ಮೂಲಕ ಉದ್ಘಾಟಿಸಿ ಅವರು ಆಶಯ ಭಾಷಣ ಮಾಡಿದರು.



**ಪುಸ್ತಕ, ಪತ್ರಿಕೆ ಅನಾವರಣ**

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಟಿ.ಎನ್. ಕೇಶವ, ಸಾಹಿತ್ಯ ಜೀವನದ ಅವಿಭಾಜ್ಯ ಅಂಗ. ಇಂದು ಸಾಹಿತ್ಯಕ್ಕೂ ಶಿಕ್ಷಣಕ್ಕೂ ಸಂಬಂಧವೇ ಇಲ್ಲದಂತಹ ಮನಸ್ಥಿತಿಯನ್ನು ವಿದ್ಯಾರ್ಥಿಗಳು ಹೊಂದಿದ್ದಾರೆ. ಹೀಗಾಗಿ ಅವರು ಸಾಹಿತ್ಯಕ್ಕೆ ಹೊರಗಿನವರಾಗಿ ಹೋಗುತ್ತಿದ್ದಾರೆ. ಅವರನ್ನು ಸಾಹಿತ್ಯದೊಳಗೆ ಕರೆತರಬೇಕಾದರೆ ಶಿಕ್ಷಣದ ಚೌಕಟ್ಟನ್ನು ಬದಲಿಸಬೇಕಾದ ಅನಿವಾರ್ಯತೆ ಇದೆ. ಸಾಹಿತ್ಯ ಅಕಾಡೆಮಿ ಸಾಹಿತ್ಯ ಪರಿಷತ್ ಮೊದಲಾದ ಕನ್ನಡಕ್ಕೆ ಸಂಬಂಧಪಟ್ಟ ಸಂಘಟನೆಗಳು ಶಿಕ್ಷಣದ ಭಾಗ ಆಗಬೇಕಾಗಿವೆ. ಸಾಹಿತ್ಯಕ್ಕೆ ಸಂಬಂಧಪಟ್ಟ ಹೊರಗಿನ ಸಂಪನ್ಮೂಲ ವ್ಯಕ್ತಿಗಳಿಗೆ ತರಗತಿಯಲ್ಲಿ ಅನುಭವಗಳನ್ನು ಹಂಚಿಕೊಳ್ಳುವ ವ್ಯವಸ್ಥೆ ಕಲ್ಪಿಸಿದಲ್ಲಿ ಏಕತಾನತೆ ಹೋಗಲಾಡಿಸಲು ಸಾಧ್ಯವಿದೆ ಮತ್ತು ಸಾಹಿತ್ಯದಲ್ಲಿ ಆಸಕ್ತಿ ಬೆಳೆಸಬಹುದಾಗಿದೆ ಎಂದರು.

ಈ ಸಂದರ್ಭ ದ್ವಿತೀಯ ಬಿ.ಎ.ಯ ಐಚ್ಛಿಕ ಕನ್ನಡದ ವಿದ್ಯಾರ್ಥಿಗಳು ಹೊರತಂದ 'ಕಗ್ಗೋಕ್ತಿ' ಎಂಬ ಹೊತ್ತಗೆಯನ್ನು ಹಾಗೂ ಪತ್ರಿಕೋದ್ಯಮ ವಿದ್ಯಾರ್ಥಿ ವಿಕ್ರಮ ಹಗ್ಡೆ ಅವರ 'ಪರಪಂಚ' ಎಂಬ 'ಪತ್ರಿಕೆಯನ್ನು 'ಲೋಕಾಪುರ ಅವರು ಅನಾವರಣಗೊಳಿಸಿದರು.

ಅಕಾಡೆಮಿ ಕಾರ್ಯಕ್ರಮ ಅಧಿಕಾರಿ ರಾಧಾಕೃಷ್ಣ ಉಪಸ್ಥಿತರಿದ್ದರು. ಕನ್ನಡ ವಿಭಾಗ ಮುಖ್ಯಸ್ಥ ಬಿ.ಪಿ.ಸಂಪತ್‌ಕುಮಾರ್ ಸ್ವಾಗತಿಸಿ, ಪ್ರಸ್ತಾವನೆಗೈದರು. ವಿದ್ಯಾರ್ಥಿನಿ ಶ್ರುತಿ ವಂದಿಸಿದರು. ಉಪನ್ಯಾಸಕ ದಿವಾ ಕೊಕ್ಕಡ ನಿರೂಪಿಸಿದರು.

### ಸಾಹಿತ್ಯ ಚಿತ್ರಣ

ದೇಶೀ ಪ್ರಜ್ಞೆಯ ಲೇಖಕರಾಗಿದ್ದ ಮಿರ್ಜಿಯವರು ನಿಸರ್ಗ ಕಾದಂಬರಿಯಲ್ಲಿ ಸಮಾಜದಲ್ಲಿ ಹೆಣ್ಣಿಗಾಗುವ ತುಳಿತವನ್ನು ವಿಶದವಾಗಿ ಚಿತ್ರಿಸಿದ್ದಾರೆ. ಬಂಡೆಗಲ್ಲಿನಲ್ಲಿನ ಒಡಕುಗಳನ್ನು ಗುರುತಿಸುವಂತೆ, ಸಮಾಜದಲ್ಲಿನ ವಿಸಂಗತ ಸಂಗತಿಗಳನ್ನು ಕಥೆ-ಕಾದಂಬರಿಗಳಲ್ಲಿ ಮೂಡಿಸುತ್ತಿದ್ದರು. ತಮ್ಮದೇ ಸಮುದಾಯದ ಆಚರಣೆ, ಸಂಪ್ರದಾಯಗಳ ಹುಳುಕುಗಳನ್ನೂ ತೆರೆದಿಡುವಲ್ಲಿ ಹಿಂದೆ ಬೀಳಲಿಲ್ಲ.

■ ಬಾಳಾ ಸಾಹೇಬ ಲೋಕಾಪುರ

### ಆಯ್ಕೆ ಆಧಾರಿತ ಮೌಲ್ಯಾಂಕನ ವ್ಯವಸ್ಥೆ

ಕಾಲೇಜಿನ ವತಿಯಿಂದ ನೂರು ಪ್ರಬಂಧಗಳನ್ನು ವಿಕಿಪಿಡಿಯಾಕ್ಕೆ ಅಪ್‌ಲೋಡ್ ಮಾಡುವ ಸಿದ್ಧತೆ ನಡೆಯುತ್ತಿದೆ. ಮುಂದಿನ ಶೈಕ್ಷಣಿಕ ವರ್ಷದಿಂದ ಕಾಲೇಜಿನಲ್ಲಿ ಆಯ್ಕೆ ಆಧಾರಿತ ಮೌಲ್ಯಂಕನ ವ್ಯವಸ್ಥೆ ಅಳವಡಿಸಲಾಗುತ್ತದೆ. ಇದರಿಂದ ವಿದ್ಯಾರ್ಥಿಗಳು ಹೆಚ್ಚುವರಿಯಾಗಿ ತಮಗೆ ಆಸಕ್ತಿ ಇರುವ 2 ವಿಷಯಗಳನ್ನು ಆಯ್ಕೆ ಮಾಡಿ ಓದಬಹುದು.

■ ಟಿ.ಎನ್. ಕೇಶವ

### ವಿಚಾರಗೋಷ್ಠಿಗಳು ಏನೇನು?

ವಿಚಾರಗೋಷ್ಠಿಯ ಮೊದಲನೇ ಗೋಷ್ಠಿಯಲ್ಲಿ ಕನ್ನಡಕಾದಂಬರಿ ಪರಂಪರೆ ಮತ್ತು ಮಿರ್ಜಿ ಅಣ್ಣಾರಾಯ ಎಂಬ ಬಗ್ಗೆ ಸಬಿತಾ ಬನ್ನಾಡಿ, ಮಿರ್ಜಿ ಅಣ್ಣಾರಾಯರ ಕಥನದಲ್ಲಿ ಪ್ರಾದೇಶಿಕ ಅಸ್ಮಿತೆ ಬಗ್ಗೆ ವೆಂಕಟಗಿರಿ ದಳವಾಯಿ, ನಿಸರ್ಗ ಕಾದಂಬರಿಯಲ್ಲಿ ಸಾಮಾಜಿಕ ಪಲ್ಲಟಗಳು ಕುರಿತು ವೀರೇಶ ಬಡಿಗೇರ , ಎರಡನೇ ಗೋಷ್ಠಿಯಲ್ಲಿ ಮಿರ್ಜಿಯವರ ಸಾಹಿತ್ಯದಲ್ಲಿ ಮಹಿಳಾ ಅಸ್ತಿತ್ವ ವಿಚಾರವಾಗಿ ಪದ್ಮಿನಿ ನಾಗರಾಜು, ಜೈನಧರ್ಮ ಹಾಗೂ ಮಿರ್ಜಿ ಕುರಿತು ಶಾಂತಿನಾಥ ದಿಬ್ಬದ ಪ್ರಬಂಧ ಮಂಡಿಸಿದರು.

# ಮಿರ್ಜಿ ಅಣ್ಣಾರಾಯರ ಜನಶತಮಾನೋತ್ಸವ

**ವಿಶ್ವವಾಣಿ ಸುದ್ದಿಮನೆ** ಬೆಳ್ತಂಗಡಿ



ಕಗ್ಗೋಕ್ತಿ ಎಂಬ ಹೊತ್ತಗೆಯನ್ನು ಅನಾವರಣಗೊಳಿಸಲಾಯಿತು.

ಕನ್ನಡ ಸಾಹಿತ್ಯವನ್ನು ಹುಟ್ಟುಹಾಕಿದವರನ್ನು ನೆನೆಯುವ, ಸಾಹಿತ್ಯದ ಹಿಂದಣ ಹೆಜ್ಜೆ ಗುರುತಿಸಿ, ಅದನ್ನು ಮುಂದಿನ ಪೀಳಿಗೆಗೆ ದಾಟಿಸುವ ಉದ್ದೇಶವನ್ನು ಸಾಹಿತ್ಯ ಅಕಾದೆಮಿ ಇಟ್ಟುಕೊಂಡು ಕಾರ್ಯ ನಿರ್ವಹಿಸುತ್ತಿದೆ ಎಂದು ಸಾಹಿತ್ಯ ಅಕಾಡೆಮಿಯ ಕನ್ನಡ ಸಲಹಾ ಸಮಿತಿ ಸದಸ್ಯ ಬಾಳಾಸಾಹೇಬ ಲೋಕಾಪುರ ಹೇಳಿದರು.

ಉಜಿರೆ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನ ಕನ್ನಡ ವಿಭಾಗದ ಆಶ್ರಯದಲ್ಲಿ ಕಾಲೇಜಿನ ಸಭಾಭವನದಲ್ಲಿ ನಡೆದ ಮಿರ್ಜಿ ಅಣ್ಣಾರಾಯರ ಜನ್ಮ ಶತಮಾನೋತ್ಸವ ವಿಚಾರಗೋಷ್ಠಿಯನ್ನು ಅಣ್ಣಾರಾಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ಉದ್ಘಾಟಿಸಿ ಮಾತನಾಡಿದರು.

ದೇಶಿ ಪ್ರಜ್ಞೆಯ ಲೇಖಕರಾಗಿದ್ದ ಮಿರ್ಜಿಯವರು ನಿಸರ್ಗ ಕಾದಂಬರಿಯಲ್ಲಿ ಸಮಾಜದಲ್ಲಿ ಹೆಣ್ಣಿಗಾಗುವ ತುಳಿತವನ್ನು ಚಿತ್ರಿಸಿದ್ದಾರೆ. ಬಂಡೆಗಲ್ಲಿನಲ್ಲಿನ ಒಡಕುಗಳನ್ನು ಗುರುತಿಸುವಂತೆ, ಸಮಾಜದಲ್ಲಿನ ವಿಸಂಗತ ಸಂಗತಿಗಳನ್ನು ಕಥೆ-ಕಾದಂಬರಿಗಳಲ್ಲಿ ಮೂಡಿಸುತ್ತಿದ್ದರು. ತಮ್ಮದೇ ಸಮುದಾಯದ ಆಚರಣೆ, ಸಂಪ್ರದಾಯಗಳ ಹುಳುಕುಗಳನ್ನೂ ತೆರೆದಿಡುವಲ್ಲಿ ಹಿಂದೆ ಬೀಳಲಿಲ್ಲ ಎಂದರು.

ಕಾಲೇಜಿನ ಪ್ರಾಂಶುಪಾಲ ಟಿ. ಎನ್. ಕೇಶವ ಮಾತನಾಡಿ, ಸಾಹಿತ್ಯ ಜೀವನದ ಅವಿಭಾಜ್ಯ ಅಂಗ. ಸಾಹಿತ್ಯಕ್ಕೂ ಶಿಕ್ಷಣಕ್ಕೂ ಸಂಬಂಧವೇ ಇಲ್ಲದಂತಹ ಮನಸ್ಥಿತಿಯನ್ನು ವಿದ್ಯಾರ್ಥಿಗಳು ಹೊಂದಿದ್ದಾರೆ. ಹೀಗಾಗಿ ಅವರು ಸಾಹಿತ್ಯಕ್ಕೆ ಹೊರಗಿನವರಾಗಿ ಹೋಗುತ್ತಿದ್ದಾರೆ. ಅವರನ್ನು ಸಾಹಿತ್ಯದೊಳಗೆ ಕರೆತರಬೇಕಾದರೆ ಶಿಕ್ಷಣದ ಚೌಕಟ್ಟನ್ನು ಬದಲಿಸಬೇಕಾದ ಅನಿವಾರ್ಯತೆ ಇದೆ. ಸಾಹಿತ್ಯ ಅಕಾಡೆಮಿ, ಸಾಹಿತ್ಯ ಪರಿಷತ್ ಮೊದಲಾದ ಕನ್ನಡಕ್ಕೆ ಸಂಬಂಧಪಟ್ಟ ಸಂಘಟನೆಗಳು ಶಿಕ್ಷಣದ ಭಾಗ ಆಗಬೇಕಾಗಿದೆ. ಸಾಹಿತ್ಯಕ್ಕೆ ಸಂಬಂಧಪಟ್ಟ ಹೊರಗಿನ ಸಂಪನ್ಮೂಲ ವ್ಯಕ್ತಿಗಳಿಗೆ ತರಗತಿಯಲ್ಲಿ ಅನುಭವಗಳನ್ನು ಹಂಚಿಕೊಳ್ಳುವ ವ್ಯವಸ್ಥೆ ಕಲ್ಪಿಸಿದಲ್ಲಿ ಏಕತಾನತೆ ಹೋಗಲಾಡಿಸಲು ಸಾಧ್ಯವಿದೆ ಮತ್ತು ಸಾಹಿತ್ಯದಲ್ಲಿ ಆಸಕ್ತಿ ಬೆಳೆಸಬಹುದಾಗಿದೆ ಎಂದರು.

ದ್ವಿತೀಯ ಬಿ.ಎ.ಯ ಐಚ್ಛಿಕ ಕನ್ನಡದ ವಿದ್ಯಾರ್ಥಿಗಳು ಹೊರತಂದ ಕಗ್ಗೋಕ್ತಿ ಎಂಬ ಹೊತ್ತಗೆಯನ್ನು ಹಾಗೂ ಪತ್ರಿಕೋದ್ಯಮ ವಿದ್ಯಾರ್ಥಿ ವಿಕ್ರಮ ಹೆಗ್ಡೆ ಅವರ ಪರಪಂಚ ಎಂಬ ಪತ್ರಿಕೆಯನ್ನು ಲೋಕಾಪುರ ಅನಾವರಣಗೊಳಿಸಿದರು.

ಅಕಾಡೆಮಿ ಕಾರ್ಯಕ್ರಮ ಅಧಿಕಾರಿ ರಾಧಾಕೃಷ್ಣ, ಕನ್ನಡ ವಿಭಾಗ ಮುಖ್ಯಸ್ಥ ಬಿ.ಪಿ. ಸಂಪತ್‌ಕುಮಾರ್, ಉಪನ್ಯಾಸಕ ದಿವಾ ಕೊಕ್ಕಡ ಇದ್ದರು.